**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.49/2024**

ಪ್ರಾ.ಸಾ. 9

ಚಾ.ಸಾ. 12

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 25.09.2025**

| | |
|---|---|
| ಸಾಕ್ಷಿದಾರರ ಹೆಸರು | ನಂಜಯ್ಯ |
| ತಂದೆಯ ಹೆಸರು | ಕರೀಗೌಡ |
| ವಯಸ್ಸು | 50 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ದುಂಡನಹಳ್ಳಿ ಗ್ರಾಮ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

1. ಸಾಕ್ಷಿ ದಿನಾಂಕ 14.06.2023 ರ ಮಹಜರು ನೋಡಿ ಒಂದು ಹೆಬ್ಬೆಟ್ಟಿನ ಗುರುತನ್ನು ನಾನೇ ಹಾಕಿದ್ದು ಎಂದು ನುಡಿದ ಕಾರಣ ಸದರಿ ದಾಖಲೆಯನ್ನು ನಿಪಿ.10 ಎಂದು ಗುರುತಿಸಲಾಯಿತು. ಸಾಕ್ಷಿಯ ಹೆಬ್ಬೆಟ್ಟು ಸಹಿಯನ್ನು ನಿಪಿ.10 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ನಮ್ಮ ಮನೆಯ ಬಳಿ ದುಂಡನಹಳ್ಳಿಯಲ್ಲಿ ಹಾಕಿದ್ದೇನೆ. ಸದರಿ ರಸ್ತೆ ಮುಂದೆ ಹೋಗಿ ಕುಣಿಗಲ್–ಮದ್ದೂರು ಮುಖ್ಯ ರಸ್ತೆಯಲ್ಲಿ ಸೇರುತ್ತದೆ. ಪೊಲೀಸರು ಸಹಿ ಪಡೆದರು. ಪೊಲೀಸರ ಜೊತೆ ಒಬ್ಬ ವ್ಯಕ್ತಿ ಇದ್ದ, ಅವನ ಹೆಸರು ನನಗೆ ಗೊತ್ತಿಲ್ಲ. ಯಾವ ವಿಚಾರಕ್ಕೆ ಹೆಬ್ಬೆಟ್ಟು ಪಡೆದರು ಗೊತ್ತಿಲ್ಲ. ಈಗ ನಾನು ನೋಡುತ್ತಿರುವ ಎರಡು ಫೋಟೋಗಳಲ್ಲಿ ನಾನು ಇದ್ದೇನೆ. ಸಾಕ್ಷಿ ಗುರುತಿಸಿದ ಫೋಟೋಗಳನ್ನು ನಿಪಿ.11 ಮತ್ತು ನಿಪಿ.12 ಎಂದು ಗುರುತಿಸಲಾಯಿತು. ನಿಪಿ.11 ರಲ್ಲಿ ನಾನು ಎಡದಿಂದ ಮೊದಲನೇಯವನು ಮತ್ತು ನಿಪಿ.12 ರಲ್ಲಿ ನಾನು ಬಲದಿಂದ

ಮೊದಲನೇಯವನು. ಸಾಕ್ಷಿ ದಿನಾಂಕ 14.06.2023ರ ನೋಟಿಸು ನೋಡಿ ತನ್ನ ಹೆಬ್ಬೆಟ್ಟು ನೋಡಿ ಗುರುತಿಸಿದ ಕಾರಣ ಅದನ್ನು ನಿಪಿ.13 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.13 ಎ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

*2.* ದಿನಾಂಕ *14.06.2023* ರಂದು ಸಂಜೆ *5.00* ಗಂಟೆ ಸಮಯಕ್ಕೆ ಮಾಡಿದ ಮಹಜರಿಗೆ ಸಾಕ್ಷಿಯಾಗಿ ಬರಬೇಕೆಂದು ನಿಪಿ.*13* ರಂತೆ ನೋಟಿಸು ನೀಡಿದರು ಎಂದರೆ ಸರಿ. ಅವರ ವಶದಲ್ಲಿ *2*ನೇ ಆರೋಪಿ ಇದ್ದ ಎಂದರೆ ಅವನು ಯಾರು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಅವನು ಆರೋಪಿಗಳು ಚಾಸಾ.*1* ರಿಂದ ಚಾಸಾ.*4* ರವರಿಗೆ ಹೊಡೆದ ಸ್ಥಳವನ್ನು ತೋರಿಸುತ್ತೇನೆಂದು ಹೇಳಿ ಚಾಸಾ.*1* ರವರ ಮನೆಯ ಬಳಿ ಕರೆದುಕೊಂಡು ಹೋದ ಎಂದರೆ ಗೊತ್ತಿಲ್ಲ. ಚಾಸಾ.*1* ರವರ ಮನೆಯ ಮುಂದೆ ಜಾಗ ತೋರಿಸಿ ಇದೇ ಜಾಗದಲ್ಲಿ ನಾವು ಚಾಸಾ.*1* ರಿಂದ ಚಾಸಾ.*4* ರವರಿಗೆ ಹಲ್ಲೆ ಮಾಡಿದ ಸ್ಥಳ ಎಂದು ಹೇಳಿದ ಎಂದರೆ ಗೊತ್ತಿಲ್ಲ. ಅಲ್ಲಿ ಪೊಲೀಸರು ಮಹಜರು ಮಾಡಿ ನನ್ನ ಹೆಬ್ಬೆಟ್ಟು ಸಹಿ ಪಡೆದುಕೊಂಡರು ಎಂದರೆ ಸರಿ.

*3.* ಆರೋಪಿಗಳು ನಮ್ಮ ಊರಿನವರು ಆದ ಕಾರಣ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎನ್ ಪಿ ವಕೀಲರಿಂದಃ**

ಪೊಲೀಸರು ನೋಟಿಸು ಕೊಟ್ಟು ಕರೆದಾಗ ಏನೂ ಮಾಡಿಲ್ಲ. ಸಹಿ ಮಾಡುವಾಗ ನನಗೆ ಓದಿಸಿ ಸಹಿ ಮಾಡಿಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.